


بسم اللهِ الرّحمٰن الرّحيم

# ರಮಝಾನ್ – ತಖ್ವ ಪಡೆಯಲು ಪರಿಶ್ರಮಿಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–03–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ ـ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ اِيَّاكَ نَعْبُدُ وَاِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಮತ್ತು ಸೂರಃ ಬಖರಃದ 185ನೇ ವಚನವನ್ನು ಪಠಿಸಿ ಅದರ ಅರ್ಥವನ್ನು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಈ ವಚನದಲ್ಲಿ ಅಲ್ಲಾಹನು ಮನುಷ್ಯರಿಗಾಗಿ ಶ್ರೇಷ್ಠ ಸನ್ಮಾರ್ಗ ದರ್ಶಕವಾದ ಪವಿತ್ರ ಖುರ್‌ಆನನ್ನು ರಮಝಾನ್ ತಿಂಗಳಲ್ಲಿ ಅವತೀರ್ಣಗೊಳಿಸಲಾಗಿದೆ ಎಂದು ಹೇಳಿ ಈ ತಿಂಗಳ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸಿರುವನು. ಅಲ್ಲಾಹನು ಅಲ್ಲಾಹನು ಈ ಗ್ರಂಥದಲ್ಲಿ ಎಲ್ಲ ವಿಷಯಗಳನ್ನು ಒಳಪಡಿಸಿ, ಅಲ್ಲಾಹನ ಕಡೆಗೆ ಧಾವಿಸುವ ಎಲ್ಲ ಮಾರ್ಗಗಳನ್ನು ತೋರಿಸಿ, ಶೈತಾನನ ಎಲ್ಲ ಮಾರ್ಗಗಳ ಬಗ್ಗೆ ಎಚ್ಚರಿಸಿ, ವರ್ತಮಾನ ಹಾಗೂ ಭವಿಷ್ಯದಲ್ಲಿ ಬರಲಿರುವ ಎಲ್ಲ ವಿಷಯಗಳ ಕುರಿತು ಮಾರ್ಗದರ್ಶನ ನೀಡುತ್ತಾ ಅವುಗಳ ಅಪಾಯಗಳಿಂದ ರಕ್ಷಣೆ ಪಡೆಯುವ ಮಾರ್ಗಗಳನ್ನೂ ತೋರಿಸಿ, ಶಿರ್ಕ್‌ನ (ಬಹುದೇವಾರಾಧನೆಯ) ಅಪಾಯವನ್ನೂ ಅದರಿಂದ ರಕ್ಷಣೆ ಹೊಂದುವ ರೀತಿಯನ್ನೂ ಕಲಿಸಿಕೊಟ್ಟು ಒಟ್ಟಿನಲ್ಲಿ, ವರ್ತಮಾನದಲ್ಲಿ ಇರುವ ಹಾಗೂ ಹಿಂದಿನ ಕಾಲದಲ್ಲಿ ಇದ್ದ ಮತ್ತು ಮುಂದೆ ಬರಲಿರುವ ಎಲ್ಲ ವಿಷಯಗಳನ್ನೂ ಪವಿತ್ರ ಖುರ್‌ಆನಿನಲ್ಲಿ ಸವಿಸ್ತಾರವಾಗಿ ವಿವರಿಸಿರುವನು. ಅಲ್ಲಾಹನೊಡನಿರುವ ಸಂಬಂಧವನ್ನು ಸುದೃಢಗೊಳಿಸಲು ಹಾಗೂ ಸನ್ಮಾರ್ಗದಲ್ಲಿ ಸ್ಥಾಯಿಯಾಗಿ ನಿಲ್ಲಲು ಬೇಕಾದ ಎಲ್ಲ ಮಾರ್ಗಗಳನ್ನೂ ಈ ಪರಿಪೂರ್ಣ ಹಾಗೂ ಕೊನೆಯ ಶರೀಅತ್ ಗ್ರಂಥದಲ್ಲಿ ಅಲ್ಲಾಹನು ವಿವರಿಸಿರುವನು.

ಆದ್ದರಿಂದ ಈ ಮಹತ್ತಾದ ಗ್ರಂಥವನ್ನು ತನ್ನ ಮಾರ್ಗಸೂಚಿಯಾಗಿ ಮಾಡಿಕೊಂಡು ಅದನ್ನು ಪಾಲಿಸುವ ಮತ್ತು ತನ್ನ ಇಹಪರ ಜೀವಿತವನ್ನು ಸುಂದರಗೊಳಿಸಿ ಸತ್ಯದಲ್ಲಿ ನೆಲೆನಿಲ್ಲುವವರು ಸೌಭಾಗ್ಯಶಾಲಿಗಳು. ಹೀಗಾದರೆ ದಾಸನೊಂದಿಗೆ ಅಲ್ಲಾಹನು ತೋರಿಸುವ ಪ್ರೀತಿಯ ದೃಶ್ಯಗಳನ್ನು ಕೂಡ ನಾವು ಕಾಣುವೆವು. ಒಟ್ಟಿನಲ್ಲಿ ಈ ತಿಂಗಳಲ್ಲಿ ಅಲ್ಲಾಹನು ಪರಿಪೂರ್ಣ ಶರೀಅತನ್ನು ನಮಗಾಗಿ ಅವತೀರ್ಣಗೊಳಿಸಿದನು ಹಾಗೂ ಆ ಗ್ರಂಥದಲ್ಲಿ ನಮಗೆ ವ್ರತಾನುಷ್ಠಾನ ಮತ್ತು ಆರಾಧನೆಗಳ ವಿಧಾನಗಳನ್ನು ಸಹ ತಿಳಿಸಿದ್ದಾನೆ ಎಂಬುದಾಗಿದೆ ರಮಝಾನ್ ತಿಂಗಳ ಪ್ರಾಧಾನ್ಯ. ಈ ಪರಿಪೂರ್ಣ ಸನ್ಮಾರ್ಗದ ಬಗ್ಗೆ ಅರಿವು ಗಳಿಸಿ ಅದನ್ನು ನಮ್ಮ ಜೀವಿತದ ಮಾರ್ಗಸೂಚಿಯನ್ನಾಗಿ ಮಾಡುವ ತನಕ ನಮಗೆ ರಮಝಾನಿನ ಪ್ರಾಮುಖ್ಯದ ಅರಿವು ಉಂಟಾಗದು. ನಾವು ಅಹ್ಮದಿಯರು ಸೌಭಾಗ್ಯಶಾಲಿಗಳು. ಏಕೆಂದರೆ ಅದರ ಅರಿವು ನಮಗೆ ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ) ನೀಡಿರುವರು. ಅದಕ್ಕಾಗಿ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳನ್ನು ಮತ್ತು ವ್ಯಾಖ್ಯಾನಗಳನ್ನು ಸಹ ಓದಬೇಕು. ಹಾಗಾದರೆ ನಾವು ಆ ಮಹತ್ತಾದ ಪವಿತ್ರ ಖುರ್‌ಆನ್ ಮತ್ತು ಸನ್ಮಾರ್ಗದರ್ಶಕವನ್ನು ಮನವರಿಕೆ ಮಾಡಿಕೊಂಡು ಅದನ್ನು ಪಾಲಿಸಲು ಸಾಧ್ಯ.

(ಹುಝೂರ್ ಹೇಳಿದರು:) ನಾವು ಯೌಮೇ ಮಸೀಹ್ ಮೌಊದ್ ದಿನವನ್ನು ಆಚರಿಸುತ್ತೇವೆ. ಅದರಲ್ಲಿ ನಾವು ಸಮ್ಮೇಳನ ಇತ್ಯಾದಿಗಳನ್ನು ನಡೆಸುತ್ತೇವೆ. ಅದರಲ್ಲಿ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿ ಮತ್ತು ಅಲ್ಲಾಹನ ವಾಗ್ದಾನಗಳ ಪ್ರಕಾರ ಮಸೀಹ್ ಮೌಊದ್(ಅ)ರ ಆಗಮನದ ಬಗ್ಗೆ ಭಾಷಣಗಳನ್ನು ನಡೆಸುತ್ತೇವೆ. ಆದರೆ ವಿಶ್ವಾಸದ ಅಭಿವೃದ್ಧಿಗಾಗಿ ಇಷ್ಟು ಮಾತ್ರ ಸಾಕಾಗುವುದಿಲ್ಲ. ಬದಲಾಗಿ ಪವಿತ್ರ ಖುರ್‌ಆನಿಗೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ) ನೀಡಿರುವ ಖಜಾನೆಯನ್ನು ಓದುವುದು, ಅದರ ಪ್ರಕಾರ ನಡೆಯುವುದು ಮತ್ತು ಅದನ್ನು ಜೀವಿತದ ಭಾಗವನ್ನಾಗಿ ಮಾಡುವುದು ಸಹ ಅತ್ಯಂತ ಮುಖ್ಯ. ಅದಿಲ್ಲದೇ ನಮ್ಮ ವಿಶ್ವಾಸ ಪೂರ್ಣವಾಗದು. ರಮಝಾನಿನಲ್ಲಿ ಉಪವಾಸ ಇರಿಸುವುದು, ಕಡ್ಡಾಯ ನಮಾಝ್‌ಗಳನ್ನು ನಿಯತವಾಗಿ ಅನುಷ್ಠಿಸುವುದು ಅಥವಾ ಅಲ್ಪಸ್ವಲ್ಪ ನಫ್ಲ್ ನಮಾಝ್‌ಗಳನ್ನು ನಿರ್ವಹಿಸುವುದರಿಂದ ರಮಝಾನಿನ ಹಕ್ಕು ಈಡೇರದು. ಬದಲಾಗಿ ಪವಿತ್ರ ಖುರ್‌ಆನನ್ನು ಓದಿ ಅದರ ಆಜ್ಞೆಗಳನ್ನು ಹುಡುಕಿ ಅವುಗಳನ್ನು ಪಾಲಿಸುವುದು ಕೂಡ ಅತ್ಯಾವಶ್ಯಕವಾಗಿದೆ. ಇದೇ ನಮ್ಮನ್ನು ಅಲ್ಲಾಹನ ದಯಾಳು ಮತ್ತು ಕರುಣಾಳು ಎಂಬ ಗುಣಗಳಿಂದ ಪ್ರಯೋಜನ ಪಡೆಯುವವರನ್ನಾಗಿ ಮಾಡುವುದು. ಹಝ್ರತ್ ಮಸೀಹ್ ಮೌಊದ್(ಅ)ರ ಅನೇಕ ನಿರ್ದೇಶನಗಳನ್ನು ಮತ್ತು ಲಿಖಿತಗಳನ್ನು ಓದಿ ಮತ್ತು ಅವುಗಳನ್ನು ಪಾಲಿಸಿ ನಾವು ನಿಜವಾಗಿಯೂ ಪವಿತ್ರ ಖುರ್‌ಆನಿನಿಂದ ಪ್ರಯೋಜನ ಪಡೆಯುವವರಾಗಬಹುದಾಗಿದೆ.

ರಮಝಾನಿನಲ್ಲಿ ವಿಶೇಷವಾಗಿ ಪ್ರತಿಯೊಬ್ಬರು ಪ್ರತಿದಿನ ಕನಿಷ್ಠ ಪಕ್ಷ ಒಂದು ಜುಝ್ಊವಿನ ತಿಲಾವತ್ ಮಾಡಬೇಕು. ಹೀಗೆ ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಒಂದು ಬಾರಿ ಓದಿ ಮುಗಿಸಬಹುದಾಗಿದೆ. ಹಝ್ರತ್ ಜಿಬ್ರೀಲ್(ಅ) ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನಿನ ಅವತೀರ್ಣವಾದಷ್ಟು ಭಾಗವನ್ನು ಹಝ್ರತ್ ಪೈಗಂಬರ್(ಸ)ರಿಗೆ ಪೂರ್ಣವಾಗಿ ಒಂದು ಬಾರಿ ಓದಿ ಹೇಳುತ್ತಿದ್ದರು ಮತ್ತು ಕೊನೆಯ ವರ್ಷ ಎರಡು ಬಾರಿ ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಓದಿ ಹೇಳಿದ್ದರು. ಆದ್ದರಿಂದ ಪವಿತ್ರ ಖುರ್‌ಆನ್ ಪಾರಾಯಣದ ಪ್ರಾಮುಖ್ಯವನ್ನು

ಪ್ರತಿಯೊಬ್ಬರು ತಮ್ಮ ಮುಂದಿರಿಸಬೇಕು. **ಶಹರು ರಮಝ್ಯಾನಲ್ಲಧೀ ಉನ್‌ಝಿಲ ಫೀಹಿಲ್ ಖುರ್‌ಆನ್** ಎಂಬ ವಚನಕ್ಕೆ ಸಂಬಂಧಪಟ್ಟು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಒಂದು ವಾಕ್ಯದಿಂದ ರಮಝ್ಯಾನ್ ತಿಂಗಳ ಮಹತ್ವದ ಅರಿವಾಗುತ್ತದೆ. ಹೃದಯವನ್ನು ಪ್ರಕಾಶಪೂರ್ಣವನ್ನಾಗಿ ಮಾಡಲು ಇದು ಉತ್ತಮವಾದ ಮಾಸವಾಗಿದೆ ಎಂದು ಸೂಫಿಗಳು ಬರೆದಿರುವರು. ಹೇರಳವಾಗಿ ಈ ಮಾಸದಲ್ಲಿ ದಿವ್ಯದರ್ಶನಗಳು ಉಂಟಾಗುತ್ತವೆ. ನಮಾಝ್ ಆತ್ಮವನ್ನು ಪರಿಶುದ್ಧಗೊಳಿಸುತ್ತದೆ ಮತ್ತು ವ್ರತಾನುಷ್ಠಾನ ಹೃದಯವನ್ನು ಬೆಳಗಿಸುತ್ತದೆ. ಖುರ್‌ಆನ್ ಎಂಬ ಪದದ ಬಗ್ಗೆ ನಾನು ಯೋಚಿಸಿದಾಗ, ಈ ಅನುಗ್ರಹೀತ ಪದದಲ್ಲಿ ಒಂದು ಮಹತ್ತಾದ ಭವಿಷ್ಯವಾಣಿ ಅಡಗಿದೆ ಎಂದು ನನಗೆ ಮನವರಿಕೆಯಾಯಿತು. ಅದೇನೆಂದರೆ, ಇದೇ ಓದಲು ಯೋಗ್ಯವಾದ ಗ್ರಂಥವಾಗಿದೆ. ಒಂದು ಕಾಲದಲ್ಲಿ ಇತರ ಪುಸ್ತಕಗಳನ್ನು ಕೂಡ ಇದಕ್ಕೆ ಸರಿಸಮಾನವಾಗಿ ಭಾವಿಸಲಾಗುವುದು. ಆದ್ದರಿಂದ ಈಗ ಎಲ್ಲ ಗ್ರಂಥಗಳನ್ನು ಬಿಟ್ಟುಕೊಂಡು ದಿನರಾತ್ರಿ ಪವಿತ್ರ ಖುರ್‌ಆನನನ್ನು ಓದಿರಿ. ನಮ್ಮ ಜಮಾಅತಿನವರು ಪವಿತ್ರ ಖುರ್‌ಆನಿಗೆ ಸಂಬಂಧಪಟ್ಟ ಕಾರ್ಯ ಮತ್ತು ಆಲೋಚನೆಯಲ್ಲಿ ಮನಸ್ಸಾರೆ ನಿರತರಾಗಬೇಕು ಮತ್ತು ಇತರ ಹೇಳಿಕೆಗಳಿಗೆ ಸಂಬಂಧಪಟ್ಟ ಕೆಲಸವನ್ನು ಬಿಡಬೇಕು.

ಈ ಕಾಲದಲ್ಲಿ ಪವಿತ್ರ ಖುರ್‌ಆನ್ ಎಂಬ ಆಯುಧವನ್ನು ಕೈಯಲ್ಲಿ ಹಿಡಿದರೆ ನಿಮಗೆ ಯಶಸ್ಸು ಲಭಿಸುವುದು. ಈ ಪ್ರಕಾಶದ ಮುಂದೆ ಯಾವ ಅಂಧಕಾರವೂ ನಿಲ್ಲದು. ಪವಿತ್ರ ಖುರ್‌ಆನಿನ ಪ್ರಕಾರ ನಡೆಯುವವರೇ ವಿಜಯಶಾಲಿಗಳಾಗುವರು. ಪವಿತ್ರ ಖುರ್‌ಆನನ್ನು ಬಿಟ್ಟುಕೊಂಡು ಯಶಸ್ಸು ಗಳಿಸುವುದು ಅಸಾಧ್ಯವಾದ ಸಂಗತಿಯಾಗಿದೆ. ಸಹಾಬಿಯರ ಮಾದರಿಗಳನ್ನು ನಿಮ್ಮ ಮುಂದಿರಿಸಿರಿ. ಅವರು ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸಿದಾಗ ಮತ್ತು ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡಿದಾಗ ಅವರೊಂದಿಗೆ ಅಲ್ಲಾಹನು ಮಾಡಿದ ಎಲ್ಲ ವಾಗ್ದಾನಗಳು ಈಡೇರಿದುವು. ಮುಸ್ಲಿಮರು ಪವಿತ್ರ ಖುರ್‌ಆನಿನ ಕಡೆಗೆ ಮರಳುವ ತನಕ ಅವರಲ್ಲಿ ಸತ್ಯವಿಶ್ವಾಸ ಉಂಟಾಗದು. ಮೊದಲು ಬಂದಿದ್ದ ಮಾರ್ಗದಲ್ಲೇ ಗೌರವ ಮತ್ತು ಉನ್ನತಿ ಬರುವುದು. ಆದ್ದರಿಂದ ಲೌಕಿಕರ ಹಿಂದೆ ನಡೆಯುವುದರಿಂದ ಸತ್ಯವಿಶ್ವಾಸ ಮತ್ತು ಸತ್ಕರ್ಮದಲ್ಲಿ ಅಭಿವೃದ್ಧಿ ಉಂಟಾಗದು. ಬದಲಾಗಿ ಪವಿತ್ರ ಖುರ್‌ಆನನ್ನು ಪಾಲಿಸುವುದರಿಂದ ಅದು ಉಂಟಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯಹೃದಯದೊಂದಿಗೆ ಅಲ್ಲಾಹನಲ್ಲಿ ನಂಬಿಕೆ ಇರಿಸುವವನಿಗೆ ಮತ್ತು ಅಲ್ಲಾಹನ ಪರಿಶುದ್ಧ ಗ್ರಂಥದ ಪ್ರಕಾರ ನಡೆಯುವವನಿಗೆ ಹಾಗೂ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವನಿಗೆ ಅಲ್ಲಾಹನು ಅಪಾರವಾದ ಅನುಗ್ರಹಗಳಿಂದ ಪಾಲು ನೀಡುತ್ತಾನೆ. ಅವನಿಗೆ ಎಂತಹ ಅನುಗ್ರಹಗಳನ್ನು ದಯಪಾಲಿಸಲಾಗುತ್ತದೆ ಎಂದರೆ, ಈ ಲೌಕಿಕ ಅನುಗ್ರಹಗಳಿಗಿಂತ ಅವುಗಳು ಬಹಳ ಹೆಚ್ಚಾಗಿರುತ್ತದೆ. ಅವನ ಪಾಪಗಳು ಕ್ಷಮಿಸಲ್ಪಡುತ್ತವೆ. ಇತರ ಜನರು ಈ ಅನುಗ್ರಹದಿಂದ ಪೂರ್ಣವಾಗಿಯೂ ವಂಚಿತರಾಗಿದ್ದಾರೆ. ನನ್ನ ಮಾತುಗಳನ್ನು ಪರಿಪೂರ್ಣ ಶ್ರದ್ಧೆಯಿಂದ ಆಲಿಸಿರಿ. ಅವುಗಳಿಗೆ ಹೃದಯದಲ್ಲಿ ಎಡೆ ನೀಡಿರಿ ಹಾಗೂ ನೀವು ಅದನ್ನು ಅಸಡ್ಡೆಯಿಂದ ಆಲಿಸಿಲ್ಲವೆಂದೂ ಅವುಗಳ ಪ್ರಭಾವ ತಾತ್ಕಾಲಿಕವಲ್ಲವೆಂದೂ ಬದಲಾಗಿ ಅದಕ್ಕೆ ಆಳವಾದ ಪ್ರಭಾವವಿದೆ ಎಂಬುದನ್ನೂ ತಮ್ಮ ಕೃತ್ಯಗಳಿಂದ ತೋರಿಸಿರಿ.

(ಹುಝೂರ್ ಹೇಳಿದರು:) ಇಲ್ಲಿ ಕುಳಿತುಕೊಂಡು ಖುತ್‌ಬ ಆಲಿಸುವ ವರೆಗೆ ಮಾತ್ರ ಅದರ ಪ್ರಭಾವ ಇರಬಾರದು. ಬದಲಾಗಿ ಅನಂತರ ಕೂಡ ಅದರ ಪ್ರಕಾರ ನಡೆಯಬೇಕು. ಅದು ಹೇಗೆಂದರೆ, ಪವಿತ್ರ ಖುರ್‌ಆನನ್ನು ಓದಬೇಕು. ರಮಝ್ಯಾನಿನಲ್ಲಿ ಅದರ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಅನಂತರ ಅದನ್ನು ಸ್ಥಾಯಿಯಾಗಿ ಜೀವಿತದ ಭಾಗವನ್ನಾಗಿ ಮಾಡಬೇಕು ಹಾಗೂ ಅದರ ಅಧ್ಯಾಪನೆ ಪ್ರಕಾರ ನಡೆಯುವವರಾಗಬೇಕು.

ಅಹ್ಮದಿಯರು ಪವಿತ್ರ ಖುರ್‌ಆನಿನಲ್ಲಿ ಅದಲು ಬದಲು ಮಾಡುತ್ತಾರೆ ಎಂದು ನಮ್ಮ ಬಗ್ಗೆ ಆಕ್ಷೇಪಿಸಲಾಗುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ದೈವಿಕ ಕಾನೂನು ಮತ್ತು ಮೋಕ್ಷದ ಮಾರ್ಗವಾಗಿದೆ. ನಾವು ಅದರಲ್ಲಿ ಬದಲಾವಣೆ ಮಾಡಿದರೆ ಅದು ಬಹಳ ದೊಡ್ಡ ಪಾಪವಾಗುವುದು. ಈ ಕುರಿತು ಯಹೂದಿಯರನ್ನು ಮತ್ತು ಕ್ರೈಸ್ತರನ್ನು ಆಕ್ಷೇಪಿಸಿಕೊಂಡು ಅನಂತರ ನಾವು ಸ್ವತಃ ಪವಿತ್ರ ಖುರ್‌ಆನಿನ ಕುರಿತು ಅದರಲ್ಲಿ ಬದಲಾವಣೆಯನ್ನು ಒಪ್ಪಿಕೊಳ್ಳುವುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಕ್ರೈಸ್ತರ ಗ್ರಂಥಗಳು ನಿಜವಾಗಿಯೂ ಬದಲಾವಣೆಗೊಂಡಿವೆ. ಹಾಗಿದ್ದರೂ ಅದರಲ್ಲಿ ಬದಲಾವಣೆ ನಡೆದದ್ದು ಸಾಬೀತುಗೊಳ್ಳದಿರಲು ಅವರು ಪ್ರಯತ್ನಿಸುತ್ತಾರೆ. ಆದರೆ ನಾವು ಸ್ವತಃ ಬದಲಾವಣೆ ಮಾಡುವುದರ ಚಿಂತೆಯಲ್ಲಿ ಇದ್ದೇವೆ ಎಂಬುದನ್ನು ಕಾಣುವಾಗ ನನಗೆ ದುಃಖ ಮತ್ತು ಆಶ್ಚರ್ಯವಾಗುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನಿಗಾಗಿ ತನ್ನ ಆತ್ಮದೊಂದಿಗೆ ಯುದ್ಧ ಮಾಡುವವನು ಅನುಗ್ರಹೀತನು. ತನ್ನ ಆತ್ಮಕ್ಕಾಗಿ ಅಲ್ಲಾಹನೊಂದಿಗೆ ಯುದ್ಧ ಮಾಡುವವನು ಮತ್ತು ಅವನೊಂದಿಗೆ ಸಂಬಂಧ ಇರಿಸದವನು ದೌರ್ಭಾಗ್ಯವಂತನು. ತನ್ನ ಆತ್ಮಕ್ಕಾಗಿ ಅಲ್ಲಾಹನ ಆದೇಶವನ್ನು ತಿರಸ್ಕರಿಸುವವನು ಸ್ವರ್ಗದಲ್ಲಿ ಖಂಡಿತವಾಗಿಯೂ ಪ್ರವೇಶಿಸಲಾರನು. ಪವಿತ್ರ ಖುರ್‌ಆನಿನ ಒಂದು ಚುಕ್ಕಿ ಕೂಡ ನಿಮ್ಮ ವಿರುದ್ಧ ಸಾಕ್ಷ್ಯ ನೀಡಿ ನೀವು ಹಿಡಿಗೂಡಲ್ಪಡದಿರಲು ನೀವು ಪ್ರಯತ್ನಿಸಿರಿ. ಏಕೆಂದರೆ ಒಂದು ಚಿಕ್ಕ ಪಾಪ ಕೂಡ ಶಿಕ್ಷೆಗೆ ಕಾರಣವಾಗಬಹುದು. ಅಲ್ಪ ಸಮಯವೇ ಬಾಕಿ ಇರುವುದು. ಆಯುಸ್ಸಿನ ಬಗ್ಗೆ ಯಾವುದೇ ಭರವಸೆಯಿಲ್ಲ. ವೇಗವಾಗಿ ಹೆಜ್ಜೆ ಹಾಕಿರಿ. ಸಂಧ್ಯಾ ಸಮಯ ಸಮೀಪವಾಗಿದೆ. ನೀವು ಅಲ್ಲಾಹನ ಸನ್ನಿಧಿಯಲ್ಲಿ ಮುಂದಿರಿಸಬೇಕಾದುದನ್ನು ಪದೇ ಪದೇ ನೋಡಿರಿ. ಯಾವುದೂ ಬಾಕಿ ಉಳಿಯದಿರಲಿ ಮತ್ತು ವ್ಯರ್ಥವಾಗುವುದಕ್ಕೆ ಕಾರಣವಾಗದಿರಲಿ. ಅಥವಾ ಅಲ್ಲಾಹನ ದರ್ಬಾರಿನಲ್ಲಿ ಮುಂದಿರಿಸಲು ಯೋಗ್ಯವಲ್ಲದ ಕೊಳಕು ಮತ್ತು ಕಳಪೆ ಸಾಮಾನುಗಳು ಮಾತ್ರ ನಿಮ್ಮ ಬಳಿಯಲ್ಲಿ ಇರುವಂತೆ ಆಗದಿರಲಿ.

ಅಲ್ಲಾಹನು ನಮಗೆ ಯಥಾರ್ಥ ಅರ್ಥಗಳಲ್ಲಿ ಪವಿತ್ರ ಖುರ್‌ಆನಿನ ಬೋಧನೆಗಳನ್ನು ಮನವರಿಕೆ ಮಾಡಲು ಮತ್ತು ಅದರ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ. ನಾವು ಸದಾ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವರಾಗಲಿ. ನಾವು ರಮಝ಼ಾನಿನಲ್ಲಿ ಮಾತ್ರವಲ್ಲ, ಬದಲಾಗಿ ಯಾವಾಗಲೂ ಪವಿತ್ರ ಖುರ್‌ಆನಿನ ಶಿಕ್ಷಣದ ಪ್ರಕಾರ ನಮ್ಮ ಜೀವಿತಗಳನ್ನು ಸಾಗಿಸುವವರಾಗಲಿ. ಹಾಗಾದರೆ ಮಾತ್ರ, ನಾವು ಹಝ಼್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಲಾದ ಬೈಅತ್ತಿನ ಹಕ್ಕನ್ನು ಈಡೇರಿಸಲು ಪ್ರಯತ್ನಿಸುವವರಾಗಿದ್ದೇವೆ ಎಂದು ಹೇಳಬಲ್ಲೆವು. ಅಲ್ಲಾಹನು ನಮಗೆ ಈ ರಮಝ಼ಾನಿನಲ್ಲೂ ಮತ್ತು ಅನಂತರವೂ ಪವಿತ್ರ ಖುರ್‌ಆನಿನ ಅಧ್ಯಾಪನೆಗಳಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡುತ್ತಿರಲಿ.

ದುಆಗಳಲ್ಲಿ ಪೆಲಸ್ತೀನಿಯರನ್ನು ಕೂಡ ನೆನಪಿಡಿರಿ. ಯುದ್ಧದ ಕಾರಣದ ಹೊರತಾಗಿಯೂ ಹಸಿವು ಮತ್ತು ರೋಗಗಳಿಂದ ಈಗ ಮಕ್ಕಳು ಮತ್ತು ಅಮಾಯಕರು ಅಸುನೀಗುತ್ತಿದ್ದಾರೆ. ಇದು ಇಸ್ರೇಲ್ ಸರ್ಕಾರದ ಕಠೋರತೆ ಮತ್ತು ಹಟದ ಕಾರಣದಿಂದ ಉಂಟಾಗಿರುವ ಮನುಷ್ಯ ನಿರ್ಮಿತ ಬರಗಾಲ ಮತ್ತು ಹಸಿವಿನ ಸ್ಥಿತಿಯ ವಿಪತ್ತು ಆಗಿದೆ ಎಂದು ಈಗ ವಿಶ್ವಸಂಸ್ಥೆ ಕೂಡ ಹೇಳಲು ಆರಂಭಿಸಿದೆ. ಮಾರ್ಗಗಳು ತೆರೆಯಲ್ಪಟ್ಟರೆ ಮತ್ತು ಸಹಾಯಗಳು ಬೇಗನೇ ತಲುಪಿದರೆ ಈಗಲೂ ಸ್ಥಿತಿ ಉತ್ತಮಗೊಳ್ಳಬಹುದು. ಅದೇ ರೀತಿಯಲ್ಲಿ ಸುಡಾನಿನ ಜನತೆಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ನಾಯಕರಿಗೂ ಮತ್ತು ಅಧಿಕಾರಿಗಳಿಗೂ ಬುದ್ಧಿ ನೀಡಲಿ. ಅಲ್ಲೂ ಜನರು ಹಸಿವು ಮತ್ತು ರೋಗದಿಂದ ಸಾಯುತ್ತಿದ್ದಾರೆ. ಸ್ವಂತ ಜನರೇ ತಮ್ಮ ಸ್ವದೇಶಿಗಳ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಭೌತಿಕ ಅಭಿಲಾಷೆಗಳು ಮತ್ತು ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನು ಮರೆತು ಬಿಟ್ಟಿರುವುದೇ ಇದಕ್ಕೆ ಕಾರಣ. ಈ ಕಾಲದಲ್ಲಿ ಅಲ್ಲಾಹನು ಕಳುಹಿಸಿದ ವ್ಯಕ್ತಿಯನ್ನು ನಂಬದೇ ಅವರು ನಿರಾಕರಿಸಿದ್ದಾರೆ. ಅನೇಕ ಇತರ ಮುಸ್ಲಿಂ ದೇಶಗಳ ಅವಸ್ಥೆ ಕೂಡ ಇದೇ ಆಗಿದೆ. ಅಲ್ಲೂ ಸಾಕಷ್ಟು ಕಷ್ಟಕರವಾದ ಸ್ಥಿತಿಯಿದೆ. ಸರ್ಕಾರಗಳು ತಮ್ಮ ಜನರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಜನರು ಪರಸ್ಪರ ಜಗಳವಾಡುತ್ತಿದ್ದಾರೆ. ಅಲ್ಲಾಹನು ಅವರ ಮೇಲೆ ದಯೆದೋರಲಿ. ಅಲ್ಲಾಹನ ಮಾರ್ಗದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಪಾಕಿಸ್ತಾನ ಮತ್ತು ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡುತ್ತಿರಿ. ಪಾಕಿಸ್ತಾನದ ಪ್ರಚಲಿತ ಸ್ಥಿತಿಗತಿಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅಹ್ಮದಿಯರನ್ನು ಸಂರಕ್ಷಿಸಲಿ.

ಖುತ್ಬದ ಕೊನೆಯಲ್ಲಿ ಹುಝ಼ೂರ್ ಆರು ದಿವಂಗತರ ಬಗ್ಗೆ, ಅವರು ಜಮಾಅತಿಗೆ ಮಾಡಿದ ಸೇವೆಗಳ ಬಗ್ಗೆ ಪ್ರಸ್ತಾಪಿಸಿದ ನಂತರ ಅವರೆಲ್ಲರ ಜನಾಝ಼ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, **'Masjid Mubarak',** Islamabad, Tilford, UK.* On 22-03-2024

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon